# ಜಿಲ್ಲಾ ಮಟ್ಟದ ಪ್ರಥಮ ಪಿಯುಸಿ ಮಧ್ಯವಾರ್ಷಿಕ ಪರೀಕ್ಷೆ ಅಕ್ಟೋಬರ್ – 2023 ದಾವಣಗೆರೆ

**ಅವಧಿ : 3:15 ನಿಮಿಷ** **ವಿಷಯ : ಕನ್ನಡ (01)** **ಗರಿಷ್ಠ ಅಂಕಗಳು : 80**

Davangere District

## ಅ ವಿಭಾಗ

**I. ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ.** **10✕1=10**

1. ಜನಕಂಗೆ ಜಲಾಂಜಲಿಯಂ ತನೂಭವಂ ಕುಡುವುದುಚಿತಮದುಗೆಟ್ಟೀಗಳ್ ನಿನಗಾಂ ಕುಡುವಂತಾದುದೆ–

ಪ್ರಶ್ನೆ : ತಂದೆಗೆ ಜಲಾಂಜಲಿಯನ್ನು ಯಾರು ಕೊಡಬೇಕು?

ಅ) ತಾಯಿ ಆ) ಮಗ ಇ) ತಮ್ಮ ಈ) ಅಣ್ಣ

2. ಅಕ್ಕಮಹಾದೇವಿಯ ವಚನಗಳ ಅಂಕಿತ ಯಾವುದು?

ಅ) ಚೆನ್ನಮಲ್ಲಿಕಾರ್ಜುನ ಆ) ಗುಹೇಶ್ವರ ಇ) ರಾಮೇಶ್ವರ ಈ) ಕೂಡಲಸಂಗಮದೇವ

3. ಚೋಳದೇಶವನ್ನು ಆಳುತ್ತಿದ್ದ ದೊರೆ ಯಾರು?

ಅ) ಅಶೋಕ ಆ) ಕೃಷ್ಣದೇವರಾಯ ಇ) ಮಯೂರವರ್ಮ ಈ) ಕರಿಕಾಲಚೋಳ

4. ಅರಗಿಳಿಗೆ ಯಾವ ಬಣ್ಣವನ್ನು ಬರೆಯಲಾಗಿದೆ?

ಅ) ಕೆಂಪು ಆ) ಹಳದಿ ಇ) ಹಸಿರು ಈ) ನೀಲಿ

5. ಶಿಶುಮಕ್ಕಳು ಹೂ ತರಲು ಎಲ್ಲಿಗೆ ಹೋಗಿದ್ದರು?

ಅ) ಮಾರುಕಟ್ಟೆಗೆ ಆ) ಕಡ್ಡಿಹಳ್ಳಕ್ಕೆ ಇ) ಅಡವಿಗೆ ಈ) ತೋಟಕ್ಕೆ

6. ಕುಟುಂಬ ಯೋಜನಾ ವಿಸ್ತರಣಾಧಿಕಾರಿಯ ಹೆಸರೇನು?

ಅ) ನಾರಾಯಣಮೂರ್ತಿ ಆ) ನರಸಿಂಹಮೂರ್ತಿ ಇ) ಶ್ರೀನಿವಾಸಮೂರ್ತಿ ಈ) ಸುಧಾಮೂರ್ತಿ

7. ಬುದ್ಧನು 'ವಿನಯ ಪೀಟಿಕಾ' ಗ್ರಂಥದಲ್ಲಿ ಯಾರಿಂದ ದೂರವಿರಬೇಕೆಂದು ಎಚ್ಚರಿಸಿದ್ದಾನೆ?

ಅ) ನಕ್ಷತ್ರ ಲೆಕ್ಕಾಚಾರದಂತಹ ತಂತ್ರಗಳಿಂದ ಜೀವನ ನಡೆಸುತ್ತಾರೋ ಇವರಿಂದ ದೂರವಿರಬೇಕು.

ಆ) ಒಳಿತು ಕೆಡುಕುಗಳ ಬಗ್ಗೆ ಭವಿಷ್ಯ ನುಡಿಯುವಂತವರಿಂದ ದೂರವಿರಬೇಕು.

ಇ) ಶಕುನದ ಆಧಾರದ ಮೇಲೆ ಶುಭ–ಅಶುಭವನ್ನು ತಿಳಿಸುವವರಿಂದ ದೂರವಿರಬೇಕು.

ಈ) ಜೋತಿಷ್ಯ ಮತ್ತಿತರ ಸಂಗತಿಗಳಿಂದ ದುರ್ಬಲ ಮನಸ್ಸಿನವರಿಂದ ದೂರವಿರಬೇಕು.

8. ಬೋಳೆಶಂಕರನ ಊರು ಯಾವುದು?

ಅ) ವಿಜಯಪುರ ಆ) ಶಿಕಾರಿಪುರ ಇ) ಹರಿಪುರ ಈ) ಶಿವಾಪುರ

9. ರಾಜಕುಮಾರಿಗೆ ಬಂದ ರೋಗ ಯಾವುದು?

ಅ) ತಲೆನೋವು ಆ) ಎದೆನೋವು ಇ) ಹೊಟ್ಟೆನೋವು ಈ) ಮೈ–ಕೈ ನೋವು

10. ನಾನು ರಾಜನಾದರೆ, ರಾಜ್ಯದಲ್ಲಿ ಸೈನ್ಯ ಇರೋದಿಲ್ಲ, ತೆರಿಗೆಗಳು ಇರೋದಿಲ್ಲ, ನಾಣ್ಯಗಳು ಇರೋದಿಲ್ಲ, ರಾಜ–ರಾಣಿಯರಿಂದ ಹಿಡಿದು ಸೇವಕರು ಸೈನಿಕರು ಎಲ್ಲರೂ ದುಡಿಯುತಾರೆ, ಎಲ್ಲರೂ ಉಣ್ಣುತ್ತಾರೆ, ದುಡಿಯದ ಕೈಗಳಿಗೆ ಸೊಂಬೇರಿಗಳಿಗೆ ಖಂಡಿತ ಅವಕಾಶವಿರುವುದಿಲ್ಲ ಎಂಬ ಮಾತಿನನ್ವಯ................

ಪ್ರಶ್ನೆ : ಬೋಳೇಶಂಕರನು ತನ್ನ ಕನಸಿನ ರಾಜ್ಯ ಹೇಗಿರಬೇಕೆಂದು ಹೇಳಿದ್ದಾನೆ?

ಅ) ಬೋಳೇಶಂಕರನು ಬ್ರಷ್ಟಾಚಾರ, ತೆರಿಗೆಗಳು ಇರಬಾರದೆಂದು ಹೇಳುತ್ತಾನೆ.

ಆ) ದುಡಿಯದ ಕೈಗಳಿಗೆ, ಸೊಂಬೇರಿಗಳಿಗೆ ಅವಕಾಶವಿರಬಾದೆಂದು ಹೇಳುತ್ತಾನೆ.

ಇ) ರಾಜ್ಯದಲ್ಲಿ ಸೈನ್ಯ, ತೆರಿಗೆ, ನಾಣ್ಯಗಳು ಇರಬಾರದೆಂದು ಹೇಳುತ್ತಾನೆ.

ಈ) ರಾಜನಾದರೆ ರಾಣಿಯರಿಂದ ಹಿಡಿದು ಸೇವಕರು, ಸೈನಿಕರು ಅರ್ಹತಾ ಮನೋಭಾವನೆಯನ್ನು ಹೊಂದಿರಬೇಕು.

**ಅ). ಬಿಟ್ಟ ಸ್ಥಳಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ:** **5✕1=5**

(ಖಗೋಳಶಾಸ್ತ್ರದಲ್ಲಿ, ಲಾರ್‌ಕೋಟ್, ಪಾತಾಳದಲ್ಲಿ, ಅಂಬವ್ವ, ಕರಿಸಿದ್ದೇಗೌಡ.)

11. ಹುಡುಗನಿಗೆ ಮಹಾತ್ಮಗಾಂಧಿ ಎಂಬ ಹೆಸರಿಟ್ಟವರು ______________

12. ಊರಿನ ನೀರು ____________ ನೆಲೆನಿಂತಿತ್ತು.

13. ಜ್ಯೋತಿಷ್ಯದ ಉಗಮವು __________ ಕಂಡು ಬರುತ್ತದೆ.

14. ಶಾಸ್ತ್ರಿ ಮಾಸ್ತರರ ಹೆಂಡತಿಯ ಹೆಸರು ______________

15. ಕಪಿಲವಸ್ತುವಿನ ಇಂದಿನ ಹೆಸರು ________________

**ಇ). ಹೊಂದಿಸಿ ಬರೆಯಿರಿ.** **5×1=5**

| | |
|---|---|
| 16. ಹರಿಹರ | ಅ) ತಲ್ಲಣಿಸದಿರು ಕಂಡ್ಯ ತಾಳುಮನವೇ |
| 17. ಲಕ್ಷ್ಮೀಶ | ಆ) ಅಖಂಡ ಕರ್ನಾಟಕ |
| 18. ಕನಕದಾಸ | ಇ) ದೇವನೊಲಿದನ ಕುಲವೇ ಸತ್ಕುಲಂ |
| 19. ಜನಪದ ಕಾವ್ಯ | ಈ) ಹಲುಬಿದಳ್ ಕಲ್ಕರಂ ಕರಗುವಂತೆ |
| 20. ಕುವೆಂಪು | ಉ) ಸಿಸು ಮಕ್ಕಳಿಗೊಲಿದ ಮಾದೇವ |
| | ಊ) ದುರ್ಯೋಧನ ವಿಲಾಪ |

## ಆ – ವಿಭಾಗ

**II. ಅ). ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:** **3×2=6**

21. ಕಾಲು ಮತ್ತು ದೇಹವನ್ನು ಯಾವುದಕ್ಕೆ ಹೋಲಿಸಲಾಗಿದೆ?
22. ಚೆನ್ನಯ್ಯನ ಗುಪ್ತಭಕ್ತಿ ಯಾವ ರೀತಿಯದು?
23. ಮೃಗಪಕ್ಷಿಗಳನ್ನು ಸ್ವಾಮಿಯು ಹೇಗೆ ರಕ್ಷಿಸುತ್ತಾನೆ?
24. ಸರಸ್ವತಿಯ ಸಚಿವ ಮಂಡಲದ ಸದಸ್ಯರು ಯಾರು?

**ಆ). ಯಾವುದಾದರೂ ಎರಡು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:** **2×2=4**

25 ನಮ್ಮ ಯಾವ ಜಿಲ್ಲೆಗಳು ರಾಗಿಯ ಕಣಜಗಳಾಗಿವೆ?
26. ವಿಜ್ಞಾನದ ಸಿದ್ಧಾಂತಗಳು ಹೇಗೆ ರೂಪುಗೊಳ್ಳುತ್ತವೆ?
27. ನಿರೂಪಕರ ಓರೆಕೋರೆಗಳನ್ನು ತಿದ್ದಿದ ಗುರುಗಳು ಯಾರ್‍ಯಾರು?
28. ನೇಪಾಳದ ವೈಮಾನಿಕ ಸಾರಿಗೆ ವ್ಯವಸ್ಥೆ ಹೇಗಿದೆ?

**ಇ). ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.:** **3×2=6**

29. ಬೆಟ್ಟದ ಮೇಲಿನ ದೇವತೆಯು ಬೋಳೇಶಂಕರನ ಅಣ್ಣ–ಅತ್ತಿಗೆಯರಿಗೆ ಹೇಗೆ ಕಾಣಿಸುತ್ತದೆ?
30. ಸೈತಾನನು ಮೂರು ಪಿಶಾಚಿಗಳನ್ನು ಭೂಲೋಕಕ್ಕೆ ಕಳುಹಿಸಿದ್ದು ಏಕೆ?
31. ರಾಜಕುಮಾರಿಯ ಹೊಟ್ಟೆನೋವು ವಾಸಿ ಮಾಡುವವರಿಗೆ ಏನೇನು ಬಹುಮಾನ ಕೊಡುವುದಾಗಿ ಡಂಗುರ ಸಾರಿಸುತ್ತಾರೆ?
32. ಪಿಶಾಚಿಗಳು ಯಾವುದರಿಂದ ನಾಣ್ಯ ಹಾಗೂ ಸಿಪಾಯಿಗಳನ್ನು ಮಾಡಿಕೊಡುತ್ತವೆ?

## ಇ – ವಿಭಾಗ

**III. ಅ). ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ:** **2×3=6**

33. ಭಾಷೆಹೀನರ ಕಂಡು ನಾಚಿಕೆಯಾಯಿತ್ತು.
34. ಹೆತ್ತಪ್ಪನಂಗೆ ಸಲುವಿದೆ.
35. ಅಲ್ತೋ ನಮ್ಮ ಕೂಗಾಟದ ರಾಜಕೀಯ ನಾಟಕ.

**ಆ). ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ:** **1×3=3**

36. ನನ್ನ ಹಿರೀಮಗ ಬಂದಾ, ನನ್ನ ಹಿರೀಮಗ ಬಂದಾ.
37. ಇನ್ನುಮುಂದೆ ಅನಗತ್ಯವಾಗಿ ಕೋಪಿಸಿಕೊಳ್ಳುವುದಿಲ್ಲ.

**ಇ). ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ:** **1×3=3**

38. ಕೊಳೆತ ಬಲೆ ಹಾಕಿ ಎಳೆದರೂ ಬರುವಂಥವರು.
39. ರಾಜಕುಮಾರಿಗೆ ಬಂದಿರೋದು, ರಾಜರೋಗ.

## ಈ – ವಿಭಾಗ

**IV. ಅ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ:** **2×4=8**

40. ಅಭಿಮನ್ಯುವಿನ ಶೌರ್ಯ–ಸಾಹಸಗಳನ್ನು ದುರ್ಯೋಧನ ಹೇಗೆ ಹೊಗಳುತ್ತಾನೆ?
41. ಚೋಳರಾಜನು ಚೆನ್ನಯ್ಯನನ್ನು ಹುಡುಕಿದ ಬಗೆ ಹೇಗೆ?
42. 'ಕರುಣಾಳು ರಾಘವನಲ್ಲಿ ತಪ್ಪಿಲ್ಲ' ಎಂಬ ಸೀತೆಯ ನಿಲುವನ್ನು ವಿಶ್ಲೇಷಿಸಿ.
43. ಮಾದೇವ ತನ್ನ ಶಿಶುಮಕ್ಕಳನ್ನು ಪರೀಕ್ಷಿಸಲು ಯಾರ್‍ಯಾರ ಸಹಕಾರವನ್ನು ಹೇಗೆ ಪಡೆದನು?

**ಆ). ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ:** **1✕4=4**

44. ಮೊಮ್ಮಗನ ಪ್ರಾಣ ಉಳಿಸಿಕೊಳ್ಳಲು ಕರಿಸಿದ್ದೇಗೌಡ ಪಟ್ಟ ಪಾಡೇನು?
45. ರಾಗಿಮುದ್ದೆ ಕುರಿತು ಇರುವ ಹತ್ತಾರು ಮೆಚ್ಚುಗೆಯ ನಂಬಿಕೆಯ ಮಾತುಗಳಾವುವು?
46. 'ಅನಾಥ ಬಾಲಕರಾಶ್ರಮ' ವನ್ನು ಶಾಸ್ತ್ರಿಮಾಸ್ತರರು ಹೇಗೆ ಪ್ರಾರಂಭಿಸಿದರು? ಅದರ ಉದ್ದೇಶವೇನು?

**ಇ). ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ:** **1✕4=4**

47. ಬೋಳೇಶಂಕರನ ಅಣ್ಣಂದಿರೇ ವಾಸಿ ಎಂದು ಪಿಶಾಚಿ ಹೇಳಲು ಕಾರಣವೇನು?
48. ಸೈನಿಕರು ಹಾಡಿದ ಸಿಟಿ ಹಾಡಿನ ಸಾರಾಂಶವೇನು?

## ಭಾಷಾಭ್ಯಾಸ

**V. ಅ). ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ:** **4✕2=8**

| | | | |
|---|---|---|---|
| 49. ಎರಡು ಪದಗಳಿಗೆ ಅರ್ಥ ಬರೆಯಿರಿ | : ಅಹಿಕೇತನ, | ತುರಗ, | ತೃಣ . |
| 50. ಎರಡು ಪದಗಳನ್ನು ಬಿಡಿಸಿ ಬರೆಯಿರಿ | : ಅದರಿಚ್ಚೆ; | ಎಷ್ಟೊತ್ತು, | ಉದ್ದಗಲ. |
| 51. ಎರಡು ಪದಗಳಿಗೆ ನಾನಾರ್ಥ ಬರೆಯಿರಿ | : ಅಡಿ, | ಗುಡಿ, | ಬಟ್ಟೆ. |
| 52. ಎರಡು ಪದಗಳಿಗೆ ವಿರುದ್ಧಾರ್ಥ ಬರೆಯಿರಿ | : ಅಪರಿಚಿತ, | ಕನಸು, | ಖಂಡ. |
| 53. ಎರಡು ಪದಗಳಿಗೆ ತದ್ಭವಗಳನ್ನು ಬರೆಯಿರಿ | : ತ್ಯಾಗ, | ಅಕ್ಷರ, | ಕಾವ್ಯ. |
| 54. ಎರಡು ಪದಗಳ ಗ್ರಾಂಥಿಕರೂಪ ಬರೆಯಿರಿ | : ಏಗ , | ರವುಸು, | ಮಕ್ಳು |

**ಆ) ಕೆಳಗಿನ ಯಾವುದಾದರೂ ಒಂದನ್ನು ಕುರಿತು ಪ್ರಬಂಧ ಬರೆಯಿರಿ:** **1✕4=4**

55 ಚಲನಚಿತ್ರಗಳ ಮಹತ್ವ.

ಅಥವಾ

ಮೂಢನಂಬಿಕೆಗಳು ಮತ್ತು ವೈಚಾರಿಕತೆ.

**ಇ) ಯಾವುದಾದರು ಒಂದನ್ನು ಕುರಿತು ಪತ್ರ ಬರೆಯಿರಿ:** **1✕4=4**

56. ನಿಮ್ಮ ಅಂಕಪಟ್ಟಿ ಮತ್ತು ವರ್ಗಾವಣಾ ಪ್ರಮಾಣಪತ್ರವನ್ನು ಕೋರಿ ಪ್ರಾಚಾರ್ಯರಿಗೊಂದು ಪತ್ರ ಬರೆಯಿರಿ.

ಅಥವಾ

ನಿಮ್ಮ ಕಾಲೇಜಿನಲ್ಲಿ ಜರುಗಿದ ಸ್ವಾತಂತ್ರ್ಯೋತ್ಸವವನ್ನು ಕುರಿತು ಗೆಳೆಯ/ಗೆಳತಿಗೆ ಒಂದು ಪತ್ರ ಬರೆಯಿರಿ.

****************************************